1) ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು:

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ನಮ್ಮ ಸೂಳೆಕೆರೆಯಲ್ಲಿ ಬಸ್ ಬಿದ್ದು ಮೂರು ಜನರು ಸತ್ತು ಹೋಗಿದ್ದು, 47 ಜನರಿಗೆ ಗಾಯಗಳಾಗಿವೆ. ಸರ್ಕಾರದಿಂದ ಇನ್ನೂ ಉತ್ತರದಿಂದ ಬರಲಿಲ್ಲ.

ವಿಷಯ : ಅಕಾಲಿಕ ಮಳೆಯಿಂದ ಬೆಳೆ ನಾಶವಾಗಿರುವ ಬಗ್ಗೆ ಚರ್ಚೆಗೆ ಅನುಮತಿ ಕೋರಿಕೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಭಾರೀ ಮಳೆಯಾಗಿ ಹತ್ತಿ, ಭತ್ತ ಹೀಗೆ ಬಹಳಷ್ಟು ಪೀಕ್‌ಗಳು ನಾಶವಾಗಿವೆ. ಒಂದೆರಡು ದಿನಗಳ ಅಕಾಲಿಕ ಮಳೆಯಿಂದ, ಯಾವ ಸಮಯಕ್ಕೆ ಮಳೆ ಬರಬೇಕು, ಆಗ ಮಳೆ ಬರದೆ, ಮಳೆಗಾಲವಲ್ಲದ ಕಾಲಕ್ಕೆ ಮಳೆ ಬಂದರೆ ಏನಾಗುತ್ತದೆಂಬ ಪರಿಣಾಮ ಮೊನ್ನೆ 2–3 ದಿನ ಮಳೆ ಆಗಿದ್ದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ. ಹೀಗಾಗಿ ಸರ್ಕಾರದಿಂದ ಇದರ ಬಗ್ಗೆ ಏನಾದರೂ ಸರ್ವೇ ಮಾಡುವುದು ಏನಾದರೂ ಆಗಿದೆಯೇ? ಇತ್ತ ಭತ್ತ ನಾಶವಾಗಿ ಭತ್ತದ ಗುಣಮಟ್ಟ ಪೂರ್ತಿ ನಾಶವಾಗಿದೆ, ಹತ್ತಿ ನಾಶವಾಗಿದೆ. ಇನ್ನೂ ಹಲವಾರು ಪೀಕುಗಳು, ತೊಗರಿ ಈ ರೀತಿ ಹಲವಾರು ಪೀಕುಗಳು ಕೊಪ್ಪಳ ಭಾಗದಲ್ಲಿ ಗುಲ್ಬರ್ಗಾ, ಶಿವಮೊಗ್ಗ ಭಾಗದಲ್ಲಿ, ಕೊಡಗಿನಲ್ಲಿ ಸಹ ಕಾಫಿ ಈ ರೀತಿ ಅಕಾಲಿಕ ಮಳೆಯಿಂದ ಬಹಳಷ್ಟು ತೊಂದರೆಯಾಗಿದೆ. ಅದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. zero hour ನಲ್ಲಿ ಕೊಟ್ಟಿದ್ದೇನೆ. ಅದಕ್ಕಾಗಿ ಸರ್ಕಾರ ತೀವ್ರತರವಾಗಿ ಗಮನ ಹರಿಸಬೇಕು.

ಅಧ್ಯಕ್ಷರು : ಇಂದು ಚರ್ಚೆಗೆ ಅವಕಾಶ ಕೊಡುತ್ತೇನೆ. ಅರ್ಧ ಗಂಟೆಯಾದರೂ ಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸಮೀಕ್ಷೆ ಮಾಡುವುದಕ್ಕೆ ಸರ್ಕಾರ ತಕ್ಷಣ ಸೂಚನೆ ಕೊಡಬೇಕು. ನಂತರ ಪರಿಹಾರ ಕೊಡಿಸಬೇಕು.

ಜಗದೀಶ್ ಶೆಟ್ಟರ್ : ಯಾರೂ ಸಮೀಕ್ಷೆ ಮಾಡಿಲ್ಲ. ಅಧಿಕಾರಿಗಳು ಯಾರೂ ಸಮೀಕ್ಷೆಗೆ ಹೋಗುತ್ತಿಲ್ಲ.

ಅಧ್ಯಕ್ಷರು : ಆಯಿತು. ಇಂದೇ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ಶನಿವಾರವೇ, ಸರ್ವೇ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಯಾರೂ field ಗೆ ಹೋಗಿ ಸರ್ವೆ ಕೆಲಸ ಮಾಡಿಲ್ಲ.

ಶ್ರೀ ಕೃಷ್ಣ ಭೈರೇಗೌಡ : ಕೇಳಿಸಿಕೊಳ್ಳಿ ಸರ್, ಕೇಳಿಸಿಕೊಳ್ಳಿ.

ಅಧ್ಯಕ್ಷರು : ಹೇಳಿ.

ಶ್ರೀ ಕೃಷ್ಣ ಭೈರೇಗೌಡ : ನೀವು ಹೇಳಿದ್ದೀರಿ, ಈಗ ಕೇಳಿಸಿಕೊಳ್ಳಿ. ಕಳೆದ ಶನಿವಾರವೇ, ವಿಪತ್ತು ನಿರ್ವಹಣಾ ಕಾರ್ಯದರ್ಶಿಗಳಿಗೆ ಹೇಳಿ ಎಲ್ಲೆಲ್ಲಿ ಅಧಿಕ ಮಳೆಯಾಗಿದೆ, ಆ ಎಲ್ಲಾ ಜಿಲ್ಲಾಧಿಕಾರಿಗಳ ಜೊತೆ ಈಗಾಗಲೇ ಮಾತನಾಡಲಾಗಿದೆ ಮತ್ತು ಎಲ್ಲೆಲ್ಲಿ ಅಕಾಲಿಕ ಮಳೆಯಿಂದ ಬೆಳೆ ಹಾನಿಯಾಗಿದೆ, ಅದನ್ನು ಸರ್ವೆ ಮಾಡಲೂ ಸಹ ಈಗಾಗಲೇ ಸೂಚನೆ ನೀಡಿದ್ದು, ಸರ್ವೆ ವರದಿ ಬಂದ ಮೇಲೆ ನೋಡೋಣ. ಆದರೆ, ಸರ್ವೆ ಮಾಡುವುದಕ್ಕೆ ಸರ್ಕಾರದಿಂದ ಸೂಚನೆ ಕೊಟ್ಟಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಇವರು ಸರ್ವೆ ಮಾಡಲು ಹೇಳಿರುವುದು standing crop ಬಗ್ಗೆ. ಇವತ್ತು ಮೆಕ್ಕೆ ಜೋಳವಿರಲಿ, ಹತ್ತಿ ಇರಲಿ, ಭತ್ತವಿರಲಿ, ಅಡಿಕೆಯಿರಲಿ standing crop ಅಲ್ಲ. ಇವರು standing crop ಬಗ್ಗೆ ಸರ್ವೆ ಮಾಡುತ್ತಾರೆ ಆದರೆ, standing crop ಬಗ್ಗೆ ಸರ್ವೆ ಮಾಡಿದರೆ ನಡೆಯುವುದಿಲ್ಲ.

ಶ್ರೀ ಕೃಷ್ಣ ಭೈರೇಗೌಡ : ಇಲ್ಲ, ಇಲ್ಲ. ಮಾನ್ಯ ಅಧ್ಯಕ್ಷರೆ, ನಮಗೂ ಸ್ವಲ್ಪ ಸಾಮಾನ್ಯ ಜ್ಞಾನವಿದೆ. ನಮಗೂ ಸ್ವಲ್ಪ common sense ಇದೆ. ಇಲ್ಲ ಸರ್,

ಕೇಳಿಸಿಕೊಳ್ಳಿ. ಸ್ಪಷ್ಟವಾಗಿ ಹೇಳಿದೆ, ಕೊಯ್ದು ಇಟ್ಟಿರುವ ಬೆಳೆ ಹಾನಿಯಾಗಿರುವುದನ್ನು ಸರ್ವೆ ಮಾಡಲು ಹೇಳಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕಡಲೆ, ಭತ್ತ, ಹತ್ತಿ, ಮೆಣಸಿನಕಾಯಿ ಎಲ್ಲಾ ಪೀಕುಗಳು ನಾಶವಾಗಿವೆ. ಅದನ್ನು ಸರ್ವೇ ಮಾಡಿ ಪರಿಹಾರ ಕೊಡಬೇಕು.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ಅಧ್ಯಕ್ಷರೆ, provision ಇಲ್ಲ, ಅದರೂ ಕೊಡಬೇಕು.

ಶ್ರೀ ಕೃಷ್ಣ ಭೈರೇಗೌಡ : ಕಳೆದ ಬಾರಿ ಆಲಿಕಲ್ಲು ಮಳೆ ಬಿದ್ದು, ಮಳೆಹಾನಿಯಲ್ಲಿ ಕೊಯಿದು ಇಟ್ಟಿದಂತಹ ಬೆಳೆಗಳು ಹಾನಿಯಾದಗಲೂ ನಾವು ಕೊಟ್ಟಿದ್ದೇವೆ, ಈ ವರ್ಷವು ಕೊಟ್ಟಿದ್ದೇವೆ. ಈ ಬಾರಿಯೂ ನಾವು ಸೂಚನೆ ಕೊಟ್ಟಿರುವುದು ಕೊಯಿದು ಇಟ್ಟಿದ್ದಾರಲ್ಲ, ಅದು ಹಾನಿಯಾದರೆ ಅದನ್ನೂ ಸರ್ವೇ ಮಾಡಲು ಹೇಳಿದ್ದೇವೆ.

ಅಧ್ಯಕ್ಷರು ಈಗ ಒಂದು ಕೆಲಸ ಮಾಡಿ. ನೀವು ನಂತರ ಒಂದು ಸಣ್ಣ statement ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಒಂದು statement ಮಾಡಿ ಬಿಡಿ. ಯಾವ್ಯಾವ ಪೀಕುಗಳು, 4–5 ಬೆಳೆಗಳು ಹತ್ತಿ, ಮೆಣಸಿನಕಾಯಿ, ಭತ್ತ, ಕಡಲೆ, ತೊಗರಿ ಇವೆಲ್ಲ ಹಾನಿಗೊಳಗಾಗಿವೆ. ಒಂದು ಸಮೀಕ್ಷೆ ಮಾಡಿಸಿ, ಒಂದು statement ಕೊಡಿ. ತಕ್ಷಣ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು : statement ಮಾಡಿಸೋಣ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ರಾಗಿ ಬೆಳೆ ಹಾನಿಯಾಗಿದೆ.

ಶ್ರೀ ಕೃಷ್ಣ ಭೈರೇಗೌಡ : ನಾವು statement ಮಾಡುವುದರಲ್ಲಿ ಹಿಂದೆ ಇರಬಹುದು, ನಾವು ಕೆಲಸದಲ್ಲಿ ಹಿಂದೆ ಇಲ್ಲ.

ಶ್ರೀ ಜಗದೀಶ ಶೆಟ್ಟರ್ : ನೀವು ಏನು ಮಾಡಿದ್ದೀರಿ ಎಂಬುದು ನಮಗೆ ಗೊತ್ತಿದೆ, ಮೆಕ್ಕೆ ಜೋಳದ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕಿತ್ತು. ಇನ್ನೂವರೆಗೆ ಮಾಡಿಲ್ಲ. ಮೆಕ್ಕೆಜೋಳದ ಪೀಕು ಬರುತ್ತಿದೆ. ಭತ್ತ, ತೊಗರಿಯದ್ದು ಇನ್ನೂ ಇಲ್ಲ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, Horticultural crops ಅವರಿಗೆ ಬರುವುದಿಲ್ಲ. ಇದು ತೋಟಗಾರಿಕಾ ಸಚಿವರಿಗೆ ಬರುತ್ತದೆ. ಉದಾಹರಣೆಗೆ ಅಡಿಕೆ ಇರಲಿ, ಬೇರೆ ಬೇರೆ ಬೆಳಗಳದ್ದು, Horticulture crop ಬಗ್ಗೆಯೂ ಸಮೀಕ್ಷೆಯಾಗಬೇಕು. ಅಡಿಕೆ ಇದೆಯಲ್ಲ, ಅಡಿಕೆ ಕೊಯ್ದು ಹಾಕಿದ್ದಾರೆ, ಅದು ಮಳೆಯಲ್ಲಿ ಸಿಲುಕಿ ಸಂಪೂರ್ಣ ಹಾಳಾಗಿ ಹೋಗುತ್ತಿದೆ. ಹಾಗಾಗಿ ಈ ರೀತಿ ಅನೇಕ ವಿಷಯಗಳಿರುವುದರಿಂದ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನನ್ನ ವಿನಂತಿ.

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, agriculture crop ಸರ್ವೆ ಮಾಡುವುದು ನಮ್ಮ ಇಲಾಖೆಗೆ ಬರುವುದಿಲ್ಲ. ಆದರೆ, ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಯಾವುದೇ ಬೆಳೆ ಹಾನಿಯಾಗಿರಲಿ, ಕಂದಾಯ ಇಲಾಖೆಗೆ ಬರುತ್ತದೆ. ಅದನ್ನ ಸಮೀಕ್ಷೆ ಮಾಡುವುದು. ಕಂದಾಯ ಇಲಾಖೆಯವರು ಆ ಕೆಲಸವನ್ನು ಜಂಟಿಯಾಗಿ ಮಾಡುತ್ತಿದ್ದಾರೆ.